ತುಂಬುವುದಕ್ಕೆ ಸುಮಾರು 1.15 ಕೋಟಿ ರೂ.ಗಳು ಮಂಜೂರಾಗಿ ಇನ್ನು ಕೆಲವೇ ದಿವಸದಲ್ಲಿ ಆ ಕೆಲಸ ಪ್ರಾರಂಭವಾಗುತ್ತದೆ. ಆ ಕೆರೆಯನ್ನು ತುಂಬಿಸು-ವಂಥ ಒಂದು ಕೆಲಸವನ್ನು ಸರ್ಕಾರ ಮಾಡಿದೆ. ಈ ಸಂದರ್ಭದಲ್ಲಿ ಅಲ್ಲಿರತಕ್ಕಂಥ ಪ್ರಕೃತಿ ಸೌಂದರ್ಯವನ್ನು ಹೆಚ್ಚಿಸಬೇಕು ಎನ್ನುವಂತಹ ಹಿನ್ನೆಲೆಯಲ್ಲಿ ಹಿಂದಿನ ಮಾನ್ಯ ಅರಣ್ಯ ಸಚಿವರಾದ ವಿಜಯ ಶಂಕರ್‌ರವರು ಅಲ್ಲಿಗೆ ವಿಶ್ರಾಂತಿ ಗೃಹದ ಉದ್ಘಾಟನೆಗೆ ಬಂದಾಗ Tree park ಮಾಡುವ ಬಗ್ಗೆ ಭರವಸೆಯನ್ನು ಕೊಟ್ಟಿದ್ದಾರೆ. ಅದರ ಜೊತೆಗೆ ಅಲ್ಲಿರುವಂತಹ ಪ್ರಕೃತಿ ಸೌಂದರ್ಯವನ್ನು ನೋಡಿದರೆ ಲಕ್ಷಾಂತರ ಪಕ್ಷಿಗಳು ಆ ಕೆರೆಯಲ್ಲಿರುವ ಗಿಡಗಂಟಿಗಳ ಮೇಲೆ ಕುಳಿತುಕೊಂಡು ತಮ್ಮ ರಕ್ಷಣೆಯನ್ನು ಪಡೆಯುತ್ತಿದ್ದವು. ಅಲ್ಲಿ ಒಂದು ಪಕ್ಷಿಧಾಮವನ್ನು ನಿರ್ಮಾಣ ಮಾಡಿದರೆ ಆ ಪ್ರಕೃತಿ ಸೌಂದರ್ಯ-ವನ್ನು ಹೆಚ್ಚಿಸಿದಂತಾಗುತ್ತದೆ. ಮತ್ತು ಪಕ್ಷಿಗಳಿಗೆ ಒಂದು ರಕ್ಷಣೆಯನ್ನು ಕೊಟ್ಟಂತಾಗುತ್ತದೆ. ನಾನು ಮಾನ್ಯ ಮಂತ್ರಿಗಳಿಗೆ ವಿನಂತಿಯನ್ನು ಮಾಡುತ್ತೇನೆ. ಇಲಾಖೆಯ ಅಧಿಕಾರಿಗಳಿಗೆ ನೇರವಾದ ಒಂದು ಸ್ಪಷ್ಟ ಆದೇಶವನ್ನು ಕೊಟ್ಟು ಇದೆ ವರ್ಷದಲ್ಲಿ ಆ ಕೆಲಸಗಳನ್ನು ಪ್ರಾರಂಭ ಮಾಡಬೇಕೆನ್ನುವ ಒಂದು ಆದೇಶವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಪಿ.ಯೋಗೇಶ್ವರ್ (ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಈ ಒಂದು ಕೆರೆ ಅರಣ್ಯ ಪ್ರದೇಶದ ವ್ಯಾಪ್ತಿಗೆ ಬರುವುದಿಲ್ಲ. ಆದರೂ ಕೂಡ ಗೌರವಾನ್ವಿತ ಸದಸ್ಯರ ಕೋರಿಕೆ ಮೇರೆಗೆ ಒಂದು ಪಕ್ಷಿಧಾಮ ಮತ್ತು Tree parkಅನ್ನು ಮಾಡುವುದರ ಬಗ್ಗೆ ಇಲಾಖೆಯ ಅನುದಾನದ ಆದ್ಯತೆ ಮೇರೆಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಅನುಮತಿ ನೀಡಿರುವ ಬೃಹತ್ ಕೈಗಾರಿಕೆಗಳು

11 (358) ಡಾ: ಶರಣ ಪ್ರಕಾಶ ರುದ್ರಪ್ಪ ಪಾಟೀಲ್

ಅ) ಗುಲ್ಬರ್ಗಾ ಜಿಲ್ಲೆ ಸೇಡಂ, ಚಿಂಚೋಳಿ ಮತ್ತು ಚಿತ್ತಾಪುರ ತಾಲ್ಲೂಕುಗಳಲ್ಲಿ ಇಲ್ಲಿಯವರೆಗೆ ಅನುಮತಿ ನೀಡಿರುವ ಬೃಹತ್ ಕೈಗಾರಿಕೆಗಳು ಎಷ್ಟು? (ತಾಲ್ಲೂಕುವಾರು ಹಾಗೂ ಸ್ಥಳವಾರು ಕಳೆದ ಮೂರು ವರ್ಷಗಳ ವಿವರ ಒದಗಿಸುವುದು)

ಮುರುಗೇಶ್ ಆರ್.ನಿರಾಣಿ
(ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ಗುಲ್ಬರ್ಗಾ ಜಿಲ್ಲೆ ಸೇಡಂ, ಚಿಚೋಳಿ ಮತ್ತು ಚಿತ್ತಾಪುರ ತಾಲ್ಲೂಕುಗಳಲ್ಲಿ ಇಲ್ಲಿಯವರೆಗೆ 11 ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಮೋದನೆ ನೀಡಲಾಗಿದೆ. (ತಾಲ್ಲೂಕುವಾರು, ಸ್ಥಳವಾರು ಮತ್ತು ಕಳೆದ ಮೂರು ವರ್ಷಗಳ ವರ್ಷವಾರು ವಿವರವನ್ನು ಅನುಬಂಧ–1 ರಲ್ಲಿ ಒದಗಿಸಿದೆ.)

Reply

a) In the last 3 years, proposals of 11 large projects have been approved for establishment in Chincholi, Sedam & Chittapura taluks of Gulbarga District (taluk wise, village wise, & year wise details are in Annexure – 1)

Annexure-1

TALUK WISE SHLCC PROJECTS APPROVED IN THE FOLLOWING TALUKS ofGULBARGA DISTRICTS FROM 2009-10 TO 2011-12

TALUKS	NO.of Projects approved	Investment (Rs.In crores)	Employment
SEDAM	3	3400	1725
CHINCHOLI	4	2670	690
CHITTAPUR	4	7680.00	5375
TOTAL	**11**	**13750**	**7790**

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಆದರೆ ಉತ್ತರ ಪೂರ್ತಿಯಾಗಿಲ್ಲ. ಮೊದಲನೆಯದಾಗಿ,ಇಂಗ್ಲೀಷ್‌ನಲ್ಲಿ ಏನು ಹೇಳಿದ್ದಾರೆ ಎಂದರೆ, 'In the last 3 years, proposals of 11 large projects have been approved for establishment in chincholi, sedam & chittapura taluks of Gulbarga district(taluk wise, village wise & yearwise details are

in Annexure-1)' ಎಂದು ಹೇಳಿದ್ದಾರೆ. ಆದರೆ village-wise & year-wise details Annexure-1 ನಲ್ಲಿ ಇಲ್ಲ. ಈ ಪ್ರಶ್ನೆ ಕೇಳಿರತಕ್ಕಂಥ ಉದ್ದೇಶವೇ– ನೆಂದರೆ, ಮೂರು ತಾಲ್ಲೂಕು, ಚಿತ್ತಾಪುರ, ಚಿಂಚೋಳಿ ಮತ್ತು ಸೇಡಂ ಇವು ತೊಗರಿ ಬೆಳೆಯತಕ್ಕಂಥ ಕಣಜಗಳಾಗಿವೆ. ಇಲ್ಲಿ 11 ಪ್ರಾಜೆಕ್ಟ್ ಅನ್ನು ನೀವು approveಮಾಡಿದ್ದೀರಿ. ಇದರಲ್ಲಿ ಸುಮಾರು 10,000 ಕ್ಕಿಂತಲೂ, 10 ರಿಂದ 12 ಸಾವಿರ ಎಕರೆ ಭೂಮಿ ನೀವು ಈ ಪ್ರಜೆಕ್ಟ್‌ಗೆ ಕೊಡಬೇಕಾಗುತ್ತದೆ. ಅದಕ್ಕಾಗಿ ನನ್ನ ಪ್ರಶ್ನೆ ಇಷ್ಟೆ ಇಲ್ಲಿ ಇಷ್ಟೊಂದು ಭೂಮಿ, ಇದೆ ಏಕೆಂದರೆ ಒಂದೊಂದು ಸಿಮೆಂಟ್ ಫ್ಯಾಕ್ಟರಿ ಬರಬೇಕಾದರೆ, 15 ರಿಂದ 2,000 ಎಕರೆಯವರೆಗೂ ಕೊಡುತ್ತಿದ್ದೀರಿ. ಅಷ್ಟು ಅವಶ್ಯಕತೆ ಇಲ್ಲ. ಏಕೆಂದರೆ ಅವರ ಪ್ರಾಜೆಕ್ಟ್‌ಗೆ ಹಾಗೂ ಕಾಲೊನಿಗೆ ಸುಮಾರು 200–400 ಎಕರೆಯಲ್ಲಿಯೇ ಆಗುತ್ತದೆ. ತಾವು ಒಂದು ಸಾರಿ ಆ ಒಂದು ಕೈಗಾರಿಕೆಗೆ ಸುಮಾರು 1,000 ಎಕರೆ ಭೂಮಿ ಒಪ್ಪಿಗೆ ಕೊಟ್ಟ ಮೇಲೆ ಅಲ್ಲಿ ಸುಮಾರು ವರ್ಷಗಳವರೆಗೂ ಆ ಭೂಮಿ ಬರಡು ಭೂಮಿ ಆಗಿಬಿಡುತ್ತದೆ. ಅಂದರೆ ನೀವು land audit ಮಾಡುತ್ತಿಲ್ಲ. ಏಕೆಂದರೆ ಹಿಂದೆಯೂ ಮಾನ್ಯ ಸಚಿವರ ಗಮನಕ್ಕೂ ತಂದಿದ್ದೇನೆ. ಅವರು ಕೇಳಿದಷ್ಟು ಕೊಟ್ಟು ಬಿಡುವುದು. ಅಂದರೆ ಪ್ರತ್ಯೇಕವಾಗಿ ನಿಮ್ಮ ಹತ್ತಿರ land Audit Department ಇಲ್ಲವೇ? ಕೈಗಾರಿಕೆಗೆ ಎಷ್ಟು ಭೂಮಿ ಬೇಕಾಗುತ್ತದೆಯೆಂದು ಯಾರೂ land audit ಮಾಡುತ್ತಿಲ್ಲ? 50 ವರ್ಷಕ್ಕೆ ಎಷ್ಟು ಭೂಮಿ ಬೇಕಾಗುತ್ತದೆಯೋ ಅಷ್ಟು ಮಾತ್ರ ಭೂಮಿ ಕೊಡಬೇಕು. ನೀವು ಸಿಕ್ಕಾಪಟ್ಟೆ ಭೂಮಿ ಕೊಟ್ಟು ಈಗ ಆ ಪ್ರದೇಶದಲ್ಲಿ ಸುಮಾರು 5,000 ರಿಂದ 8,000 ಎಕರೆ ಭೂಮಿ ಇವತ್ತು ಕೈಗಾರಿಕೆಗೂ ಉಪಯೋಗವಾಗುತ್ತಿಲ್ಲ, ರೈತರಿಗೂ ಉಪಯೋಗವಾಗುತ್ತಿಲ್ಲ. ಏಕೆಂದರೆ ಇವತ್ತು ರೈತರಿಗೆ, pulsesಬೆಳೆಯುವಂತಹ ಭೂಮಿ ಅದು ಒಂದು ಬಹಳ ಬೆಲೆ ಬಾಳುವಂತಹ ಹಾಗೂ fertile land. ಈ ರೀತಿ ನೀವು ಮಾಡುವುದರಿಂದ landನ ಉತ್ಪಾದಕತೆ ಕುಗ್ಗುತ್ತಿದೆ. ಆದ್ದರಿಂದ ಮಾನ್ಯ ಸಚಿವರು ಇದಕ್ಕೆ ಉತ್ತರ ನೀಡಬೇಕು.

ಶ್ರೀ ಮುರುಗೇಶ್ ಆರ್.ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು): ಶಾಸಕರು ಹೇಳಿರುವಂತಹ ಸಲಹೆ ಸರಿಯಿದೆ. ಈಗಾಗಲೇ ನಾವು land Audit Committeeಯನ್ನು ಕಳೆದ ಮೂರು ವರ್ಷಗಳಿಂದ ಪ್ರಾರಂಭ ಮಾಡಿದ್ದೇವೆ. ಮೊದಲು ಅವರು ಎಷ್ಟು ಭೂಮಿ ಕೇಳುತ್ತಿದ್ದರು ಅಷ್ಟು ಭೂಮಿಯನ್ನು ಕೊಡುತ್ತಿದ್ದರು. ಆದರೆ ಈಗ ಪ್ರತಿ ಮಿಲಿಯನ್ ಟನ್‌ಗೆ ಎಷ್ಟು ಎಕರೆ landಬೇಕು ಎನ್ನುವುದನ್ನು ಮತ್ತು ಅಷ್ಟು ಎಕರೆಯಲ್ಲಿ ಎಷ್ಟು quantity

lands ಇವೆ ಎನ್ನುವುದನ್ನು ಆ ಸರ್ವೆ ಮುಖಾಂತರ ಅದನ್ನು allotmentಮಾಡುತ್ತೇವೆ. ಕೇವಲ 1,000 ಎಕರೆ ಮೂರು ಮಿಲಿಯನ್ ಟನ್‌ಗೆ ಕೊಟ್ಟರೆ ಎಷ್ಟು quantityಇದೆ ಎನ್ನುವುದು important. ಎಷ್ಟು ಎಕರೆ ಇದೆ ಎನ್ನುವುದು importantಬರುವುದಿಲ್ಲ. ಆದರೂ ಸಹ ಒಳ್ಳೆಯ ಸಲಹೆ ಇದೆ. ಯಾವುದೇ ರೀತಿಯಿಂದ investmentಮಾಡುವುದು installಮಾಡುವ capacityಗೆ ಮತ್ತುexpansionಮಾಡುವಂತಹ planಗಳಿಗೆ ಅನುಗುಣವಾಗಿ ಮುಂದಿನ 40–50 ವರ್ಷದವರೆಗೆ ಅವರಿಗೆ raw material ಸಿಗುವಂಥದ್ದನ್ನು ಗಣನೆಗೆ ತೆಗೆದುಕೊಂಡು allotment ಮಾಡುತ್ತೇವೆ. ಯಾವುದೇ ರೀತಿಯ ಹೆಚ್ಚಿಗೆ ಭೂಮಿಯನ್ನು ಕೊಡುವುದನ್ನು ನಿಲ್ಲಿಸುತ್ತೇವೆ.

ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಇದರಲ್ಲಿ ಇನ್ನೊಂದು ಏನಾಗುತ್ತಿದೆಯೆಂದರೆ, ಸರ್ಕಾರಿ ಭೂಮಿಯನ್ನು ನೀವು ಬೇಕಾಬಿಟ್ಟಿ ಕೊಡುತ್ತಿದ್ದೀರಿ. ಸರ್ಕಾರಕ್ಕೆ ನಾನು ಪದೇ ಪದೇ ಹೇಳುತ್ತಿದ್ದೇನೆ. ದಯವಿಟ್ಟು ತಾವು ಭೂಮಿಯನ್ನು ಕೊಡುವುದಕ್ಕೆ ಹೋಗಬೇಡಿ. ಏಕೆಂದರೆ ಅನಾವಶ್ಯ-ಕವಾಗಿ 300–400 ಎಕರೆ ಸರ್ಕಾರಿ ಭೂಮಿ ಕೊಡುತ್ತಿದ್ದೀರಿ.

ಶ್ರೀ ಮುರುಗೇಶ್ ಆರ್.ನಿರಾಣಿ: ಸರ್ಕಾರಿ ಭೂಮಿಯನ್ನು irrigation projectನಲ್ಲಿ ಮಧ್ಯೆದಲ್ಲಿ ಬಂದರೆ ಮಾತ್ರ ಒಳಗೆ ಕೊಡುತ್ತಿದ್ದೇವೆ. ನೇರವಾಗಿ ಪೂರ್ತಿಯಾಗಿ ಸರ್ಕಾರಿ ಭೂಮಿ ಇದ್ದರೆ ಕೊಡುತ್ತಿಲ್ಲ.

ಡಾ. ಶರಣ ಪ್ರಕಾಶ ರುದ್ರಪ್ಪ ಪಾಟೀಲ್: ಮಧ್ಯದಲ್ಲಿ ಅಲ್ಲ. ಒಂದು ವೇಳೆ ಮಧ್ಯದಲ್ಲಿ ಬಂದರೆ ನೀವು ಅವರಿಗೆ ಬೇರೆ ಕಡೆ alternative landಕೊಡುವುದಕ್ಕೆ ಹೇಳಿ.

ಶ್ರೀ ಮುರುಗೇಶ್ ಆರ್.ನಿರಾಣಿ: ನಾವು massಆಗಿ acquisitionಮಾಡುವಂತಹ ಸಂದರ್ಭದಲ್ಲಿ packageಗಳು ಬಂದರೆ ಕೊಡುತ್ತೇವೆ.

ಡಾ.ಶರಣ ಪ್ರಕಾಶ ರುದ್ರಪ್ಪ ಪಾಟೀಲ್:ಆ ಒಂದು areaದಲ್ಲಿ ಬಂದರೆ, ಕೊನೆಯಲ್ಲಿ ಬೇರೆ private land ನವರು purchase ಮಾಡಬೇಕೆಂದರೆ ಆ ಗ್ರಾಮಗಳಿಗೆ, ಗೋಮಾಳದಲ್ಲಿರುವ ದನಕರುಗಳಿಗೆ ಆ ಭೂಮಿ ಬೇಕಾಗುತ್ತದೆ. ದಯವಿಟ್ಟು ಸರ್ಕಾರಿ ಭೂಮಿಯನ್ನು ಕೊಡಬೇಡಿ. ಇನ್ನೊಂದು, ಕೈಗಾರಿಕೆಗಳು ಯಾವುದೇ ರೀತಿಯಾಗಿ ಪಾರದರ್ಶಕವಾಗಿ ಕಾನೂನು ಬದ್ಧವಾಗಿ ಕೆಲಸ ಮಾಡುತ್ತಿಲ್ಲ. ನೀವು ಇವತ್ತು ಅವರಿಗೆ permissionಕೊಟ್ಟುಬಿಡುತ್ತಿರಿ. ಅವರು ಯಾವ ರೀತಿಯಾಗಿ ಅರಾಜಕತೆ ಮಾಡುತ್ತಾರೆ ಎಂದು ನೀವು ಅಲ್ಲಿ ಬಂದು

ನೋಡಬೇಕು. ಒಂದು ವೇಳೆ ನೀವು ಎಲ್ಲಾ ರೈತರನ್ನು ಕರೆಸಿ, ಮೀಟಿಂಗ್ ಮಾಡಿrate fix ಮಾಡಿದರೆ ನಮ್ಮದೇನೂ ಅಭ್ಯಂತರವಿಲ್ಲ. ಅವರು ಏನು ಮಾಡುತ್ತಾರೆಂದರೆ, ಏಜೆಂಟ್‌ಗಳಿಗೆ ಬಿಟ್ಟು ಬಿಡುತ್ತಾರೆ, ಇವತ್ತು ಅವರಿಗೆ ಸರಿಯಾಗಿ priceಕೊಡುತ್ತಿಲ್ಲ. 3–4 ವರ್ಷವಾದರೂ ಕೂಡ implementಮಾಡುತ್ತಿಲ್ಲ. ಏಕೆಂದರೆ ನೀವು ಅದನ್ನು monitorಮಾಡುತ್ತಿಲ್ಲ. ನೀವು ರೈತರ ಮೇಲೆ ಬಿಟ್ಟುಬಿಡುತ್ತಿದ್ದೀರಿ. ಅವರು ಏನು ಮಾಡುತ್ತಿದ್ದಾರೆಂದರೆ ಒಬ್ಬರ ಮೇಲೆ ಒಬ್ಬರು ಎತ್ತಿ ಕಟ್ಟಿ ಕಡಿಮೆ ದರದಲ್ಲಿ ಭೂಮಿ purchaseಮಾಡುತ್ತಿದ್ದಾರೆ. ಇದರಿಂದ ನಮ್ಮ ರೈತರಿಗೆ ಬಹಳ ತೊಂದರೆಯಾಗುತ್ತಿದೆ.

ಶ್ರೀ ಮುರುಗೇಶ್ ಆರ್.ನಿರಾಣಿ:implementಮಾಡಲು ಯಾವ ರೀತಿ ಎರಡು ವರ್ಷಗಳ ಕಾಲಾವಕಾಶ ಕೊಟ್ಟಿರುತ್ತೇವೆ ಅದರಲ್ಲಿ ಭೂಮಿಯನ್ನು acquisitionಮಾಡುವಂಥದ್ದು with consent ಮಾಡುವುದರಲ್ಲಿ ಸ್ವಲ್ಪ ಪ್ರತ್ಯಯವಾಗುತ್ತಿದೆ. ಎಲ್ಲಾ with compulsory acquisition ಆದರೆ immediateಆಗಿ within time ನಲ್ಲಿ ನಾವು allotment ಮಾಡಬಹುದು. ಅವರು ಆ ನಿರ್ದಿಷ್ಟವಾಗಿರುವಂತಹ ಸಮಯದಲ್ಲಿಯೇ project ಪ್ರಾರಂಭ ಮಾಡುತ್ತಾರೆ. ಅದನ್ನು section 109 ನಲ್ಲಿ ಮಾಡುವುದರಿಂದ ಅವರ ಒಪ್ಪಿಗೆ ಪಡೆದುಕೊಂಡು ಮಾಡಬೇಕಾಗಿರುವುದರಿಂದ ಎಲ್ಲಾ ರೈತರು ಒಂದೇ ಬಾರಿ ಒಪ್ಪುವುದಿಲ್ಲ. ಆದರೂ ಒಳ್ಳೆಯ ಸಲಹೆ ಇದೆ. ಎಲ್ಲಿ ಗೋಮಾಳಗಳು ಪೂರ್ತಿಯಾಗಿ ಬಂದಿರುತ್ತದೆ ಅದನ್ನು allotmentಮಾಡುವುದಿಲ್ಲ. ಕೇವಲ ಮಧ್ಯೆದಲ್ಲಿ ಬಂದಿರುವುದರಿಂದ ಕೇವಲ 10–20% ರಷ್ಟು ಮಾತ್ರ taxಬದಲು ಮಾಡುತ್ತೇವೆ. ತಾವು ನೀಡಿರುವ ಸಲಹೆಯನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು: ಮಾನ್ಯ ನರೇಂದ್ರ ಸ್ವಾಮಿಯವರು, ಹಾಜರಿಲ್ಲ. ಮಾನ್ಯ ಚೆ.ನರಸಿಂಹಸ್ವಾಮಿಯವರು, ಹಾಜರಿಲ್ಲ. ಮಾನ್ಯ ಎಂ.ಶ್ರೀನಿವಾಸ್‌ರವರು, ಹಾಜರಿಲ್ಲ. ಮಾನ್ಯ ಯು.ಟಿ.ಖಾದರ್‌ರವರು ಪ್ರಶ್ನೆ ಕೇಳುವುದು.

ಪ್ರಶ್ನೆ ಸಂಖ್ಯೆ 12(364), 13(492) ಹಾಗೂ 14(519) =ಮಾನ್ಯ ಸದಸ್ಯರುಗಳು ಗೈರು ಹಾಜರಾಗಿದ್ದರು.

2000ರ ಜಾಗತಿಕ ಬಂಡವಾಳ ಹೂಡಿಕೆದಾರರ ಸಮ್ಮೇಳನದ ಫಲಶೃತಿ

15 (480) ಶ್ರೀ ಖಾದರ್ ಯು.ಟಿ.(ಮಂಗಳೂರು)